ಅ) ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾದ ಪುನರ್ವಸತಿ ಕೇಂದ್ರಗಳೆಷ್ಟು;

ಆ) ಸದರಿ 18 ಪುನರ್ವಸತಿ ಕೇಂದ್ರಗಳಲ್ಲಿ ಆಶ್ರಯ ಯೋಜನೆಯಡಿ ಈಗಾಗಲೇ ಮನೆಗಳನ್ನು ಯೋಜನೆಯನುಸಾರ ಮಂಜೂರು ಮಾಡಲಾಗುವುದೆಂದು ತಿಳಿಸಿದ್ದರೂ ಸಹ ಇದುವರೆಗೆ ಮನೆಗಳನ್ನು ನೀಡದಿರಲು ಕಾರಣಗಳೇನು;

ಇ) ಆಶ್ರಯ ಯೋಜನೆಯ ಮನೆಗಳನ್ನು ಹಂಚಿಕೆ ಮಾಡುವಲ್ಲಿ ಇರುವ ತೊಂದರೆಗಳೇನು; ಎಷ್ಟು ಮನೆಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ;

ಈ) ಯಾವಾಗ ಹಂಚಿಕೆ ಕಾರ್ಯ ಮುಗಿಸಲಾಗುವುದು; ವಿವರ ಒದಗಿಸುವುದು; ಹಾಲಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು;

ಉ) ಆಶ್ರಯ ಯೋಜನೆಯ ಮನೆಗಳ ಹಂಚಿಕೆ ವಿಳಂಬವಾಗಲು ಕಾರಣಗಳೇನು; ಯಾವ ಕ್ರಮ ಕೈಗೊಳ್ಳಲಾಗುತ್ತದೆ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) 16 ಪುನರ್ವಸತಿ ಕೇಂದ್ರಗಳಿವೆ.

ಆ) ಇ) ಈ) ಉ) 2002–03 ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಗೆ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ 4000 ಮನೆಗಳ ಗುರಿಯನ್ನು ನೀಡಲಾಗಿದ್ದು. ಅದರಲ್ಲಿ ಕೆಲವು ಮನೆಗಳ ಗುರಿಯನ್ನು ಬಸವನಬಾಗೇವಾಡಿ ವಿಧಾನ ಸಭಾ ಕ್ಷೇತ್ರಕ್ಕೆ ನೀಡಲಾಗುವುದು. ಹಾಗೂ 2003–04ನೇ ಸಾಲಿನ ಗುರಿಯನ್ನು ನೀಡಿರುವುದಿಲ್ಲ. ಗುರಿಯನ್ನು ನಿಗಧಿಪಡಿಸಿದ ನಂತರ ಸಂಬಂಧಿಸಿದ ಆಶ್ರಯ ಸಮಿತಿಯೇ ಈ ಬಗ್ಗೆ ತಮ್ಮ ಹಂತದಲ್ಲಿ ಮನೆ ನೀಡಲು ಕ್ರಮ ಕೈಗೊಳ್ಳಬಹುದು. ಆದಕಾರಣ ಮನೆ ನೀಡುವಲ್ಲಿ ವಿಳಂಬವಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಅನುದಾನ ರಹಿತ ಎಸ್‌ಸಿ–ಎಸ್.ಟಿ ಮ್ಯಾನೇಜ್‌ಮೆಂಟ್ ಪ್ರೌಢಶಾಲೆಗಳ ಮಾಹಿತಿ

4057 (4569) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನುದಾನ ರಹಿತ ಎಸ್.ಸಿ/ಎಸ್.ಟಿ ಮ್ಯಾನೇಜ್‌ಮೆಂಟ್ ಪ್ರೌಢ ಶಾಲೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಪ್ರಸಕ್ತ ಹಣಕಾಸು ವರ್ಷದಲ್ಲಿ ವಿಜಾಪುರ ಜಿಲ್ಲೆಯ ಯಾವ ಯಾವ ಎಸ್.ಸಿ/ಎಸ್.ಟಿ ಪ್ರೌಢ ಶಾಲೆಗಳಿಗೆ ಹಣಕಾಸು ಸೌಲಭ್ಯ ಮಂಜೂರು ಮಾಡಲಾಗಿದೆ. (ವಿವರ ನೀಡುವುದು)

ಪ್ರೊ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 750

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರಸ್ತುತ 2003–04ನೇ ಹಣಕಾಸು ವರ್ಷದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಒಂದು ಶಾಲೆಗೆ ಅನುದಾನಕ್ಕೆ ಒಳಪಡಿಸಿದೆ. (ಶರಣಬಸವೇಶ್ವರ ಪ್ರೌಢ ಶಾಲೆ, ನಾಗಾವಿ, ಬಸವನಬಾಗೇವಾಡಿ ತಾಲ್ಲೂಕು)